ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/ಚಟುವಟಿಕೆ/02/2019-20

ಸಂಯೋಜನಾಧಿಕಾರಿಯವರ ಕಛೇರಿ,
ಅರಮನೆ ರಸ್ತೆ ಬೆಂಗಳೂರು-01
ದಿನಾಂಕ: 17-07-2019

## ಸುತ್ತೋಲೆ

**ವಿಷಯ:** ರಾಜ್ಯದ ಎಲ್ಲಾ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಮತದಾರ ಸಾಕ್ಷರತಾ ಸಂಘ (Electoral Literacy Clubs) ಗಳನ್ನು ಸ್ಥಾಪಿಸುವ ಮತ್ತು ಕಾರ್ಯ ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವ ಕುರಿತು.

**ಉಲ್ಲೇಖ:** 1) ಇಲಾಖೆ ಪತ್ರ ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/ಚಟುವಟಿಕೆ/05/2017-18 ದಿನಾಂಕ: 21-02-2019

2) ಮುಖ್ಯ ಚುನಾವಣಾಧಿಕಾರಿಯವರ ಪತ್ರ ಸಂಖ್ಯೆ: ಸಿಇಸುಇ/56/ಸ್ವೀಪ್/2019 ದಿನಾಂಕ: 12 ನೇ ಜುಲೈ 2019

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಯುವ ಮತದಾರರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ರ್‍ರಾಜ್ಯದ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಮತದಾರ ಸಾಕ್ಷರತಾ ಸಂಘ (Electoral Literacy Clubs) ಗಳನ್ನು ಸ್ಥಾಪನೆ ಮಾಡಲು ಉಲ್ಲೇಖ (1) ರಲ್ಲಿ ಈಗಾಗಲೇ ಸೂಚಿಸಿದೆ. ಮುಂದುವರೆದು ಉಲ್ಲೇಖ(2)ರ ಸೂಚನೆಯಂತೆ, ಈ ವರೆಗೂ ನೊಂದಣಿ ಮಾಡದೇ ಇರುವ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಸಂಸ್ಥೆಗಳು https://ecisveep.nic.in/report/clubid_request/ ಮೂಲಕ ನೊಂದಣಿ ಮಾಡುವುದು. ನೊಂದಾಯಿಸಿದ ವಿವರವನ್ನು https://forms.gle/dfzWhbpSJ9mqhu368 ಮೂಲಕ ನಿರ್ದೇನಾಲಯಕ್ಕೆ ನೀಡುವುದು. ಮತದಾರ ಸಾಕ್ಷರತ ಸಂಘಗಳ ಕಾರ್ಯ ಚಟುವಟಿಕೆಗಳ ಸಂಪನ್ಮೂಲವನ್ನು https://ecisveep.nic.in/files/category/12-elcs/ ಮೂಲಕ ಅಥವಾ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಿಂದ ಪಡೆಯುವುದು. ಸಂಪನ್ಮೂಲದಲ್ಲಿ ತಿಳಿಸಿದ ಚಟುವಟಿಕೆಗಳನ್ನು ಕೈಗೊಂಡು ಅದರ ಮಾಹಿತಿಯನ್ನು ಪ್ರತಿ ತಿಂಗಳು 5ನೆ ತಾರೀಖಿನೊಳಗಾಗಿ Word Document ನಲ್ಲಿ ಮುಖ್ಯ ಚುನಾವಣಾಧಿಕಾರಿಯವರ ಕಛೇರಿ ಮಿಂಚಂಚೆ ವಿಳಾಸ ceosveep@gmail.com ಕ್ಕೆ ಕಳುಹಿಸುವುದು.

ನಿರ್ದೇಶಕರು

ಇವರಿಗೆ,

ತಾಂತ್ರಿಕ ಶಿಕ್ಷಣ ಇಲಾಖೆಗೆ ಒಳಪಡುವ ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ- ಸೂಕ್ತ ಕ್ರಮಕ್ಕಾಗಿ.

ಪ್ರತಿ.

1. ರಾಜ್ಯ ಚುನಾವಣಾಧಿಕಾರಿಗಳು, ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು-01- ಮಾಹಿತಿಗಾಗಿ.
2. ಇ-ಆಡಳಿತ ಅಂತರ್‌ಜಾಲತಾಣದಲ್ಲಿ ಪ್ರಕಟಿಸಲು
3. ಕಛೇರಿ ಕಡತಕ್ಕೆ